ಬಂದೆಯೇನೆ” ಅಂತ ಅಮ್ಮ ಕೇಳಿದಾಗ ನಕ್ಕು, “ಹೌದು, ಹೋಗಿ ಬಂದೆ. ಕತೆ ಕೇಳು” ಎಂದವರು ನಡೆದಿದ್ದು ಹೇಳಿದರಂತೆ.

ಜಲಜಾ ಮೇಡಮ್ ಆವತ್ತು ನಮ್ಮ ಮನೆಯಿಂದ ಈ ವಿಷಯ ಶಾಸ್ತ್ರಿಗಳಿಗೆ ಹೇಳಬೇಕು ಎಂದುಕೊಂಡು ಮನೆಗೆ ಹೋದಾಗ ಶಾಸ್ತ್ರಿಗಳು ಹೆಂಡತಿ ಪಾಪ ಸುಸ್ತಾಗಿ ಬಂದಿರುತ್ತಾಳೆ ಅಂತ ಉಪ್ಪಿಟ್ಟು ಮಾಡಿಕೊಂಡು ಕುಳಿತಿದ್ದರಂತೆ. ಜಲಜಾ ಮೇಡಮ್ ಹೀಗೆ ಆಯಿತು, ನಾಳೆ ಅವನು ಏನು ಕೇಳುತ್ತಾನೆ ಅನ್ನುವುದು ಗೊತ್ತಿದೆ, ಏನು ಮಾಡುವುದು ಅಂದರಂತೆ. ಶಾಸ್ತ್ರಿಗಳು ಬಹಳ ತಣ್ಣಗೆ, ‘‘ಇರಲಿ ಬಿಡು, ಆಮೇಲೆ ಮಾತನಾಡೋಣ, ಮೊದಲು ಉಪ್ಪಿಟ್ಟು ತಿನ್ನು” ಅಂದರಂತೆ. ಶಾಸ್ತ್ರಿಗಳ ಬಗ್ಗೆ ಗೊತ್ತಿದ್ದ ಜಲಜಾ ಮೇಡಮ್‌ಗೂ ಒಮ್ಮೆ ಆಶ್ಚರ್ಯ ಆಯಿತಂತೆ. ಈ ಯಪ್ಪ ಈಗಲಾದರೂ ಸಿಟ್ಟು ಮಾಡಿಕೊಳ್ಳಬಾರದೇ, ಯಾವಾಗಲೂ ಹೀಗೆ ತಣ್ಣಗೆ ಇರುವುದಾದರೆ ಮನುಷ್ಯನಾಗಿ ಏನು ಬಂತು ಎಂದು ಅನಿಸಿತಂತೆ. ಆನಂತರ ಶಾಸ್ತ್ರಿಗಳು ನಿಧಾನವಾಗಿ ಕೂತು ಹೇಳಿದರಂತೆ. “ಕೆಲಸಕ್ಕೆ ಹೋಗಬೇಕೆಂದರೆ ಈ ತರಹದ್ದು ಆಗೇ ಆಗುತ್ತದೆ. ಈ ತರಹದವರು ಎಲ್ಲಾ ಕಡೆ ಇರುತ್ತಾರೆ. ಅಡುಗೆ ಮನೆ ಬಿಟ್ಟು ಹೊರಗೆ ಹೋದಾಗ ಕೆಲವು ವಿಷಯ ನಿಭಾಯಿಸಲು ಕಲಿಯಬೇಕು. ಇದನ್ನೂ ನಿಭಾಯಿಸೋಣ ಬಿಡು” ಎಂದು ಏನು ಮಾಡಬೇಕು ಎಂಬುದನ್ನು ಹೇಳಿದರಂತೆ. “ಅಷ್ಟು ಸುಲಭವಾಗಿ ಒಪ್ಪುತ್ತಾನೆಯೇ ಅವನು” ಅಂದಾಗ, ಮೊದಲು ಹೀಗೆ ಮಾಡೋಣ, ಆಮೇಲೆ ಮುಂದಿನದು ನೋಡೋಣ ಅಂದರಂತೆ.

ಮಾರನೇ ದಿನ ಜಲಜಾ ಮೇಡಮ್ ತಾವಾಗಿಯೇ ಸೆಕ್ರೆಟರಿಯ ಬಳಿ ಹೋದರಂತೆ. ಅವನನ್ನು ಒಂದಷ್ಟು ಹೊಗಳಿ ಆಮೇಲೆ ತಾವಾಗಿಯೇ, ಸಾರ್, ನೀವು ದೈವಭಕ್ತರು ಅಂತ ಗೊತ್ತು, ನನಗೆ ಕೆಲಸ ಸಿಕ್ಕ ತಕ್ಷಣ ನಿಮ್ಮನ್ನು ತೀರ್ಥಯಾತ್ರೆಗೆ ಕರೆದುಕೊಂಡು ಹೋಗಬೇಕು ಅಂತ ಇದ್ದೀನಿ ಎಂದು ಹೇಳಿ ಒಮ್ಮೆ ಮಾದಕವಾಗಿ ನಕ್ಕರಂತೆ. ಸೆಕ್ರೆಟರಿ ಮರುದಿನವೇ ಹೋಗುವುದಕ್ಕೆ ತಯಾರಾದನಂತೆ. ಆದರೆ, ಜಲಜಾ ಮೇಡಮ್, “ನಾನು ಕೊಟ್ಟ ಮಾತು ತಪ್ಪುವವಳಲ್ಲ, ನಿಮ್ಮನ್ನು ಕರೆದುಕೊಂಡು ಹೋಗಬೇಕು ಅಂತ ನನಗೂ ಮನಸ್ಸಿದೆ, ಖಂಡಿತಾ ತೀರ್ಥಯಾತ್ರೆಗೆ ಹೋಗೋಣ. ಹೋಗಿ ಪೂಜೆ ಮಾಡಿಕೊಂಡು ಬರೋಣ” ಎಂದು ಮಾದಕವಾಗಿ ನಕ್ಕರಂತೆ. ಸೆಕ್ರೆಟರಿ ಇಷ್ಟು ಧೈರ್ಯವಾಗಿ, ಮಾದಕವಾಗಿ ಮಾತನಾಡಿದ ಹೆಂಗಸರನ್ನೇ ನೋಡಿರಲಿಲ್ಲ. ಅವನು ಅದನ್ನು ನಿಜ ಎಂದೇ ನಂಬಿದನಂತೆ.

ಆಮೇಲೆ ಜಲಜಾ ಮೇಡಮ್‌ಗೆ ಕೆಲಸದ ಆರ್ಡರ್ ಸಿಕ್ಕಿತು. ಅದು ಆಗಿ ಸ್ವಲ್ಪ ದಿನ ಹೀಗೆಯೇ ಸೆಕ್ರೆಟರಿಯ ಬಳಿ ಮಾತನಾಡುತ್ತ ಅವನಿಗೆ ತುಸುವೂ ಅನುಮಾನ ಬರದ ಹಾಗೆ ನಡೆದುಕೊಂಡು, ತಮಗೇ “ತೀರ್ಥಯಾತ್ರೆ” ಹೋಗಲು ಇಷ್ಟ ಇರುವ ಹಾಗೆ ನಂಬಿಸಿ, ಮುಂದೂಡುತ್ತಾ ಬಂದರಂತೆ. ಆಮೇಲೆ ಒಂದು ದಿನ ಸಂಜೆ ಸೆಕ್ರೆಟರಿ ಮತ್ತು ಅವನ ಹೆಂಡತಿ ಇಬ್ಬರೂ ಮನೆಯಲ್ಲಿರುವ ದಿನ ನೋಡಿ ಶಾಸ್ತ್ರಿಗಳು, ಜಲಜಾ ಮೇಡಮ್ ಕೂಡಿ ಸೆಕ್ರೆಟರಿ ಮನೆಗೆ ಹೋದರಂತೆ. ಹೂವು, ಹಣ್ಣು, ದೇವರ ಪ್ರಸಾದ, ಕುಂಕುಮ ಎಲ್ಲಾ ತೆಗೆದುಕೊಂಡು ಹೋಗಿ ಸೆಕ್ರೆಟರಿ ಮತ್ತು ಅವನ ಹೆಂಡತಿಯನ್ನು ಕೂರಿಸಿ ಆರತಿ ಮಾಡಿದ ಜಲಜಾ ಮೇಡಮ್ ಹೇಳಿದರಂತೆ: “ನಿಮ್ಮ ಮನೆಯವರು ಬಹಳ ಒಳ್ಳೆಯ ಜನ. ನಾನು ಅವರಿಗೆ ಈ ಕೆಲಸ ಸಿಕ್ಕರೆ ತೀರ್ಥಯಾತ್ರೆಗೆ ಕರೆದುಕೊಂಡು ಹೋಗುವುದಾಗಿ ಹೇಳಿದ್ದೆ (ಹೀಗೆ ಹೇಳುವಾಗ ಸೆಕ್ರೆಟರಿಯ ಮುಖ ಹೆದರಿ ಕಪ್ಪಿಟ್ಟು ಹೋಯಿತಂತೆ). ಅವರು ಎಲ್ಲರೂ ಸೇರಿ ಹೋಗೋಣ ಅಂದಿದ್ದರು. ನಾವು ನೀವು ಎಲ್ಲಾ ಸೇರಿ ತಿರುಪತಿಗೆ ಹೋಗುವ. ಅಲ್ಲಿ ನಿಮ್ಮ ಮತ್ತು ನಮ್ಮ ಮನೆಯವರ ಹೆಸರಿನಲ್ಲಿ ಆರತಿ ಮಾಡಿಸಬೇಕು ಅಂತ ಅಂದುಕೊಂಡಿದ್ದೇನೆ. ನೀವು ನನ್ನ ತಂದೆ ತಾಯಿಯ ಹಾಗೆ ಇರುವಿರಿ, ದಯವಿಟ್ಟು ಇದಕ್ಕೆ ಒಪ್ಪಿಕೊಳ್ಳಿ.” ಜೊತೆಗೆ ತಾನು